

‘ಭಕ್ತ ನಿವಾಸ’ದ ಬಾವಿಯ ಚೌಕಾಕಾರದ ಮ್ಯಾನ್ ಹೋಲ್ ಮೇಲಿನಿಂದ ನೋಡಿದರೆ ಹೀಗೆ ಕಾಣಿಸುತ್ತದೆ.



‘ಭಕ್ತ ನಿವಾಸ’ದ ಬಾವಿ. ಈಗ ಕಾಣಿಸುತ್ತಿರುವುದು ಮೇಲು ಬಾವಿ ಮಳೆನೀರ ಸಂಗ್ರಹದ್ದು.

ತೆರೆದ ಬಾವಿಯೇ ಮಳೆನೀರಿನ ಟಾಂಕಿಯೂ ಹೌದು. ಮೇಲ್ನೋಟಕ್ಕೆ ವಿಚಿತ್ರ ಎನ್ನಿಸುವ ಈ ‘ಟು ಇನ್ ವನ್’ ಬಾವಿಯ ಬಗ್ಗೆ ಕೇಳಿದ್ದೀರಾ?

ಮಹಾರಾಷ್ಟ್ರದ ಪಶ್ಚಿಮ ಕರಾವಳಿಯಲ್ಲಿ ವೆಲ್ನೇಶ್ವರ್ ಎಂಬ ದೇಗುಲ ಪಟ್ಟಣವಿದೆ. ಇಲ್ಲಿನ ಕಡಲ ಕಿನಾರೆಯೂ ಪ್ರಸಿದ್ಧವೇ. ಸಮುದ್ರ ಮತ್ತು ದೇವರ ದರ್ಶನಕ್ಕಾಗಿ ಈ ಪ್ರವಾಸಿ ತಾಣಕ್ಕೆ ಜನ ಬರುತ್ತಿರುತ್ತಾರೆ. ರತ್ನಗಿರಿ ಜಿಲ್ಲೆಯ ರತ್ನಗಿರಿ ನಗರದಿಂದ ವೆಲ್ನೇಶ್ವರ್ ಎಪ್ಪತ್ತು ಕಿಲೋಮೀಟರ್ ದೂರದಲ್ಲಿದೆ.

ಈ ಗ್ರಾಮ ಗೋಖಲೆ, ಸಾವರ್ಕರ್, ಗಾಡ್ಗಿಲ್, ವೇಲಾಂಕರ್, ತುಳ್‌ಪುಳೆ ಮೊದಲಾದವರ ಕುಟುಂಬಗಳ ಮೂಲಸ್ಥಾನವಂತೆ. ಇವರೆಲ್ಲರ ಕುಲದೇವರು ಇಲ್ಲಿನ ಈಶ್ವರ – ವೆಲ್ನೇಶ್ವರ.

ವೆಲ್ನೇಶ್ವರದಲ್ಲಿ ಪ್ರವಾಸಿಗಳಿಗೆ ವಸತಿ ಸೌಕರ್ಯ ಒದಗಿಸುವ ‘ಭಕ್ತ ನಿವಾಸ್’ ಎಂಬ ಸಮುಚ್ಚಯವಿದೆ. ಅವರ ಬಾವಿಯ ಆಳ 33 ಅಡಿ. ನೀರಿನ ಅವಶ್ಯಕತೆಯೂ ಹೆಚ್ಚೇ ಇತ್ತು ಎನ್ನಿ. ಚೌಕಾಕಾರದ ಈ ಬಾವಿಯಲ್ಲಿ ಏಪ್ರಿಲ್ ಬರುತ್ತಲೇ ನೀರು ತುಂಬ ಕಮ್ಮಿಯಾಗುತ್ತಿತ್ತು. ಇದು ಸುಮಾರು ಎರಡು ದಶಕದ ಹಿಂದಿನ ಕತೆ.

## ಎರಡು ತಿಂಗಳು ಬಂದ್

ಬೇಸಿಗೆ ಮತ್ತು ಬೇಸಿಗೆ ರಜಾಕಾಲ ಇಲ್ಲಿ ಪ್ರವಾಸಿ ಸೀಸನ್. ನಾಲ್ಕು ಕಾಸು ಸಂಪಾದಿಸುವ ಸಮಯದಲ್ಲೇ ನೀರಿನ ಕೊರತೆಯಾದರೆ ಹೇಗೆ? ಆಗೆಲ್ಲಾ ಈ ಊರಿನಲ್ಲಿ ನೀರಿನ ಟ್ಯಾಂಕರುಗಳ ಸರ್ವೀಸ್ ಇರಲಿಲ್ಲ. ಇವರೇ ವಾಹನ ಗೊತ್ತು ಪಡಿಸಿ ಬ್ಯಾರಲು ಹೇರಿಕೊಂಡು ದೂರಕ್ಕೆ ಹೋಗಿ ನೀರು ಕೊಂಡುಕೊಂಡು ತರುವುದು ಕಷ್ಟದ ಕೆಲಸ ಆಗಿತ್ತು. ಹೀಗಾಗಿ ಅನಿವಾರ್ಯವಾಗಿ ಇವರು ಬಾವಿ ಬತ್ತಿದ ಕೂಡಲೇ ‘ಭಕ್ತ ನಿವಾಸ್’ ಬಂದ್ ಮಾಡಬೇಕಾಗಿ ಬಂತು. ಈ ಸಮಸ್ಯೆಗೆ ಪರಿಹಾರ ಯಾರಿಗೂ ಗೊತ್ತಿರಲಿಲ್ಲ. ಮೂರುನಾಲ್ಕು ವರ್ಷ ಹೀಗೆಯೇ ಮುಂದುವರಿಯಿತು.

ವೆಲ್ನೇಶ್ವರ ದೇವರ ಭಕ್ತವರ್ಗದಲ್ಲಿ ಪುಣೆಯ ಒಬ್ಬರು ಪ್ರೊಫೆಸರರೂ ಇದ್ದರು. ಡಾ. ಚಂದ್ರಶೇಖರ್ ಗಾಡ್ಗಿಲ್. ಅವರಿಗೆ ಇಲ್ಲಿನ ಈಶ್ವರ ಕುಲದೇವರು. ಸಾಮಾಜಿಕ ಕಾರ್ಯಗಳಲ್ಲೂ ತೊಡಗಿಸಿಕೊಂಡಿದ್ದ ಚಂದ್ರಶೇಖರ್ ವೆಲ್ನೇಶ್ವರಕ್ಕೆ ಒಮ್ಮೊಮ್ಮೆ ಬಂದು ಹೋಗುತ್ತಿದ್ದರು. ಇಲ್ಲಿನ ಕೆಲವರು ‘ವೆಲ್ನೇಶ್ವರ ಸೇವಾ ಮಂಡಳಿ’ಯ ಟ್ರಸ್ಟಿ ಗೋಪಾಲಕೃಷ್ಣ ಗೋಖಲೆ ಅವರ ಜತೆ ಪುಣೆಗೆ ಹೋದರು. ಗಾಡ್ಗಿಲರೊಡನೆ ತಮ್ಮ ಬಾವಿಯ ಸಮಸ್ಯೆ ಬಗ್ಗೆ ವಿವರಿಸಿದರು. ‘ಏನಾದರೂ ಮಾಡಲು ಸಾಧ್ಯವೇ?’ ಎಂದು ಕೇಳಿದರು.

ಚಂದ್ರಶೇಖರ್ ಇಲ್ಲಿನ ಸ್ಥಿತಿಗತಿಯ ಅಧ್ಯಯನ ಮಾಡಿದರು. ಮಳೆಗಾಲದಲ್ಲೂ ಈ ಬಾವಿಯಲ್ಲಿ ನೀರಿನ ಮಟ್ಟ ಭಾರೀ ಮೇಲಕ್ಕೇನೂ ಏರುತ್ತಿರಲಿಲ್ಲ. ಅಂದಮೇಲೆ ಬಾವಿಯ ಮೇಲ್ಭಾಗ ಒಂದು ರೀತಿಯಲ್ಲಿ ‘ಡೆಡ್ ಇನ್‌ವೆಸ್ಟ್‌ಮೆಂಟ್’ ಆಗುತ್ತಲ್ಲಾ ಅನಿಸಿತು. ಮೇಲಿನ ಭಾಗವನ್ನೂ ಸದುಪಯೋಗಪಡಿಸುತ್ತಾ ಇಲ್ಲಿನ ಎರಡು–ಮೂರು ತಿಂಗಳ ನೀರಿನ ಕೊರತೆ ಹೇಗೆ ಪರಿಹರಿಸಬಹುದು? ಈ ನಿರ್ದಿಷ್ಟ ವಿಚಾರದಲ್ಲಿ ಗಾಡ್ಗಿಲ್ ಅವರ ಯೋಚನೆ ಮುಂದುವರಿಯಿತು. ಮನದಿಂದ ಈ ಪ್ರಶ್ನೆ ಮಾಸಲೇ ಇಲ್ಲ.

ಗಾಡ್ಗಿಲ್ ಅವರು ಎಂಜಿನಿಯರಿಂಗ್ ಪ್ರೊಫೆಸರರು. ಪುಣೆಯ ಸರಕಾರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಇನ್‌ಸ್ಟ್ರುಮೆಂಟೇಶನ್ ವಿಭಾಗದ ಮುಖ್ಯಸ್ಥರಾಗಿದ್ದರು. ಬಹಳಷ್ಟು ತಲೆ ಓಡಿಸಿದ ಮೇಲೆ ಅವರ ಮನಸ್ಸಿನಲ್ಲಿ ಹುಟ್ಟಿದ ಕಲ್ಪನೆ